ಗೆಳೆಯರನ್ನು ಭೇಟಿಯಾಗುವ ಅಬ್ದುಲ್ ಹಮೀದನ ಬಗ್ಗೆ ಅಸೂಯೆಯಾಯಿತು. ಆತನ ಆಪ್ತಗೆಳೆಯ ಇಸ್ಮಾಯಿಲ್‌ನಲ್ಲಿ ತನ್ನ ಜೀವನ ಸಂಗಾತಿಯಾದ ತನ್ನೊಂದಿಗೂ ಹಂಚಿಕೊಳ್ಳದ ಎಷ್ಟೋ ಒಳ ವಿಷಯಗಳನ್ನು ಹಮೀದ್ ಹಂಚಿಕೊಂಡಿರಬಹುದು. ಆದರೆ ತಾನು, ಆತನಿಗೆ ನಾಲ್ಕು ಮಕ್ಕಳನ್ನು ಹೆತ್ತು ಕೊಟ್ಟ ಪತ್ನಿ!

ಇಸಾನ ಕಿರಾಣಿ ಅಂಗಡಿಯನ್ನಾಕೆ ಹೊಕ್ಕಾಗ, ಸಯೀದಾಳ ಭಾವನೆಗಳು ಬಣ್ಣದಿಂದ ಉಕ್ಕುತ್ತಿದ್ದವು. ಆಕೆ ಅನ್ಯಮನಸ್ಕಳಾಗಿರುವುದನ್ನು ಆ ಮುದುಕ ಗ್ರಹಿಸಿ, ಹೇಳಿದ: ''ಕೂತುಕೊ ಸಯೀದಾ, ಯಾಕೆ ಬೆಳ್ಳಂ ಬೆಳಗ್ಗೆಯೇ ಬೇಸರ ಮಾಡಿಕೊಂಡ ಹಾಗಿದೆಯಲ್ಲ?''

ಆಕೆ ಪ್ರತಿಕ್ರಿಯಿಸುವ ಮೊದಲೆ ತನಗೆಲ್ಲ ಗೊತ್ತು ಎಂಬಂತೆ ಆ ದಿನಬಳಕೆಯ ವಸ್ತುವಿನ ಬೆಲೆಗಳು ಆಕಾಶಕ್ಕೇರಿವೆ, ಜೀವನ ದುಸ್ತರವಾಗಿದೆ. ಈ ಪರಿಪಾಟಲಿನಿಂದ ಬೇಸತ್ತ ಜನ ರಸ್ತೆಯಲ್ಲಿ ಗೊಣಗಿಕೊಳ್ಳುತ್ತಿರುತ್ತಾರೆ (ಆತ, ಸಯೀದ ತನ್ನಲ್ಲಿ ತಾನೇ ಮಾತಾಡಿಕೊಳ್ಳುವುದನ್ನು ಗಮನಿಸಿದ್ದ). ಹೀಗಾಗಿ, ಅವರ ಕುಟುಂಬಕ್ಕೆ ದೀರ್ಘಕಾಲದಿಂದ ಕಿರಾಣಿ ಸರಬರಾಜು ಮಾಡುತ್ತ ಕುಟುಂಬ ಹಿತೈಷಿಯಂತಾಗಿದ್ದ ಆತ ಸಂತೈಸಿದ:

''ಅಬ್ದುಲ್ ಹಮೀದ, ಹೆಂಡತಿ ಮಕ್ಕಳನ್ನು ಸುಖವಾಗಿ ಸಾಕಲು ತನ್ನ ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾನೆ. ನೀನು ಅವನೊಂದಿಗೆ ಸಹಕರಿಸಬೇಕು'' ಇತ್ಯಾದಿ. ಆದರೆ, ಇದ್ದಕ್ಕಿದ್ದಂತೆ ಸಯೀದಾ ಅಳಲು ಪ್ರಾರಂಭಿಸಿದೊಡನೆ ಆತ ದಂಗಾಗಿಹೋದ. ಆತ್ಮೀಯರೊಬ್ಬರನ್ನು ಕಳೆದುಕೊಂಡಂತೆ ಆಕೆ ಬಿಕ್ಕುತ್ತಿದ್ದಳು. ಇಸಾ, ಕೈಹಿಡಿದು ಒಳಗೆ ಕರೆದು ಕುರ್ಚಿಯ ಮೇಲೆ ಆಕೆಯನ್ನು ಕುಳ್ಳರಿಸಿ, ಕುಡಿಯಲು ಪಾನಕ ಕೊಟ್ಟ. ''ಸಮಾಧಾನ ಮಾಡಿಕೊ ಎಲ್ಲ ಒಳ್ಳೇದಾಗುತ್ತೆ'' ಅಂದ. ಇನ್ನೂ ಮುಂಜಾನೆಯಾಗಿದ್ದರಿಂದ,

